ರಾಜ್ಯದ ಮುಖ್ಯ ಪ್ರವಾಸೋದ್ಯಮ ಸ್ಥಳಗಳಲ್ಲಿ ಸಂಚಾರಿ ಉಪಹಾರ ಗೃಹಗಳು.

541 (346): ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದ ಮುಖ್ಯ ಪ್ರವಾಸೋದ್ಯಮ ಸ್ಥಳಗಳಲ್ಲಿ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತವು ಸಂಚಾರಿ ಉಪಹಾರ ಗೃಹ (ಸಂಚಾರಿ ವ್ಯಾನ್)ಗಳನ್ನು ನಡೆಸುತ್ತಿದೆಯೇ:

ಆ. ಇಲ್ಲದಿದ್ದಲ್ಲಿ, ಎಲ್ಲಾ ಪ್ರವಾಸಿ ಸ್ಥಾನಗಳಲ್ಲಿ ಸಂಚಾರಿ ಉಪಹಾರ ಗೃಹ (ಸಂಚಾರಿ ವ್ಯಾನ್)ಗಳನ್ನು ನಡೆಸುವ ಪ್ರಸ್ತಾವನೆ ಏನಾದರೂ ಇದೆಯೇ ?

ಶ್ರೀ ಪೆರಿಕಲ್ ಎಂ. ಮಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಇಲ್ಲ.

ಆ. ಸಧ್ಯಕ್ಕೆ ಪ್ರಸ್ತಾವನೆ ಇಲ್ಲ.

ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಬಗ್ಗೆ.

543 (345): ಶ್ರೀ ಎಂ.ವಿ. ವೆಂಕಟಪ್ಪ (ಮುಲಬಾಗಲು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೇಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1989ರಿಂದ ಈಚೆಗೆ ರಾಜ್ಯ ಸರ್ಕಾರದ ಸೇವೆಯಲ್ಲಿರುವ ಯಾವ ಯಾವ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ:

ಆ. ಯಾವ ಕಾರಣಕ್ಕಾಗಿ ಈ ಕೆಲವು ಅಧಿಕಾರಿಗಳ ಮೇಲೆ ಕೈಗೊಂಡಿದ್ದ ಶಿಸ್ತಿನ ಕ್ರಮವನ್ನು ಕೈಬಿಡಲಾಯಿತು ಮತ್ತು ಯಾವ ಕಾರಣಕ್ಕಾಗಿ ಕೆಲವು ಅಧಿಕಾರಿಗಳನ್ನು ಶಿಕ್ಷಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಐ.ಎ.ಎಸ್. ಅಧಿಕಾರಿಗಳು:

ಶ್ರೀಯುತರು:

1. ಎಂ. ಶಂಕರನಾರಾಯಣನ್
2. ಕೌಶಿಕ್ ಮುಖರ್ಜಿ
3. ಆರ್. ಕೆ. ಭಾಟಿಯಾ
4. ಡಿ. ತಂಗರಾಜ್
5. ಎಂ. ಮದನ್ ಗೋಪಾಲ್
6. ರಿಚರ್ಡ್ ಕ್ರಾಸ್ಟಾ
7. ಪಿ. ಜಿ. ನಾಯ್ಕ್
8. ಬಿ. ಕೆ. ಡಿ. ನೇಗಿ.

ಐ.ಪಿ.ಎಸ್. ಅಧಿಕಾರಿಗಳು:

1. ಕೆ. ಎಸ್. ಎನ್. ಚಿಕ್ಕೆರೂರು
2. ಸುಭಾಷ್ ಚಂದ್ರ
3. ಬಿ. ಇ. ಉಮಾಪತಿ

ಆ. ಶ್ರೀ. ಎಂ. ಶೆಂಕರನಾರಾಯಣನ್, ಐಎಎಸ್ ಮತ್ತು ಶ್ರೀ ಎಂ. ಮದನಗೋಪಾಲ್, ಐಎಎಸ್, ಇವರ ಪ್ರಕರಣಗಳನ್ನು ಸರ್ಕಾರ ಪುನರ್ ಪರಿಶೀಲನೆ ಮಾಡಿ ಶಿಸ್ತಿನ ಕ್ರಮವನ್ನು ಮುಂದುವರಿಸುವ ಅಗತ್ಯವಿಲ್ಲವೆಂದು ನಿರ್ಧಾರ ಕೈಗೊಂಡಿದೆ.

ಶ್ರೀ ರಿಚರ್ಡ್ ಕ್ರಾಸ್ಟಾ, ಐಎಎಸ್, ಇವರ ಪ್ರಕರಣದಲ್ಲಿ ಇವರು ಗೈರು ಹಾಜರಾದ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಯಿತು. ಅವರು ರಾಜೀನಾಮೆ ನೀಡಿದ್ದರಿಂದ ಮುಂದಿನ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ತಂಗರಾಜ್, ಐಎಎಸ್ ರವರು ಕರ್ನಾಟಕ ಭೂ ಮಂಜೂರಾತಿ ನಿಯಮಗಳನ್ನು ಉಲ್ಲಂಘಿಸಿ ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮ ಇವರಿಗೆ ಜಮೀನು ಮಂಜೂರು ಮಾಡಿದ್ದರಿಂದ ಅವರಿಗೆ ಎಚ್ಚರಿಗೆ ನೀಡಲಾಗಿದೆ.

ಶ್ರೀ ಆರ್.ಕೆ. ಭಾಟಿಯಾ, ಇವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಲಾಗಿ, ಅವರು ನಿರ್ದೋಷಿ ಎಂದು ವಿಚಾರಣಾಧಿಕಾರಿಯವರು ಸರ್ಕಾರಕ್ಕೆ ವರದಿ ಸಲ್ಲಿಸಿದರು. ಆದರಂತೆ ಸರ್ಕಾರವು ವಿಚಾರಣಾಧಿಕಾರಿಗಳ ವರದಿಯನ್ನು ಒಪ್ಪಿಕೊಂಡು ಶ್ರೀ ಆರ್.ಕೆ. ಭಾಟಿಯಾ ಇವರನ್ನು ದೋಷ ಮುಕ್ತರೆಂದು ಪರಿಗಣಿಸಿ, ಶಿಸ್ತಿನ ಕ್ರಮವನ್ನು ಕೈಬಿಡಲಾಯಿತು.

ಶ್ರೀ ಕೌಶಿಕ್ ಮುಖರ್ಜಿ ಇವರ ಮೇಲೆ ಭಾರತ ಸರ್ಕಾರವು ಇಲಾಖಾ ವಿಚಾರಣೆಯನ್ನು ನಡೆಸಿ, ಅವರು ತಪ್ಪಿತಸ್ಥರೆಂದು ಸಾಬೀತಾಗಿದ್ದರಿಂದ, ಅವರ ಈಗಿನ ವೇತನ ಶ್ರೇಣಿಯನ್ನು ಎರಡು ವರ್ಷಗಳ ಅವಧಿಗೆ ಕಡಿಮೆಗೊಳಿಸುವಂತೆ ಶಿಕ್ಷೆಯನ್ನು ವಿಧಿಸಿ ಭಾರತ ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆ.

ಶ್ರೀ ಕೆ.ಎಸ್.ಎನ್. ಚಿಕ್ಕರೂರು, ಐಪಿಎಸ್, ಇವರು ಲೋಕಾಯುಕ್ತ ಕಛೇರಿಯಿಂದ ವರ್ಗಾವಣೆಯಾದಾಗ ಕಡತಗಳನ್ನು ಹಿಂದಿರುಗಿಸದಿದ್ದ ಕಾರಣ, ಇವರ ಸಾಬೀತಾದ ಆರೋಪಗಳ ಮೇರೆಗೆ ಒಂದು ವೇತನ ಬಡ್ತಿಯನ್ನು ತಡೆ ಹಿಡಿದು ಶಿಕ್ಷಿಸಲಾಯಿತು.

ಶ್ರೀ ಪಿ.ಜಿ. ನಾಯ್ಕ, ಐಎಎಸ್., ಶ್ರೀ ಬಿ.ಕೆ.ಡಿ. ನೇಗಿ, ಐಎಎಸ್, ಶ್ರೀ ಸುಭಾಷ್ ಚಂದ್ರ, ಐಪಿಎಸ್, ಮತ್ತು ಶ್ರೀ ಬಿ.ಇ. ಉಮಾಪತಿ, ಐಪಿಎಸ್. ಇವರ ಪ್ರಕರಣಗಳು ಬೇರೆ ಬೇರೆ ಹಂತಗಳಲ್ಲಿವೆ ಮತ್ತು ಅಂತಿಮ ನಿರ್ಧಾರವನ್ನು ತೆಗೆದುಕೊಂಡಿಲ್ಲ.

ಟೆಂಪರೆನ್ಸ್ ಬೋರ್ಡ್‌ನ ಸಾಧನೆಗಳು

544 (576): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಟೆಂಪರೆನ್ಸ್ ಬೋರ್ಡ್ ಯಾವ ತಾರೀಖಿನಿಂದ ಅಸ್ಥಿತ್ವಕ್ಕೆ ಬಂದಿರುವುದು:

ಆ. ಈ ಬೋರ್ಡಿನವರು ಇದುವರೆಗೆ ಸಾಧಿಸಿರುವ ಕೆಲಸಗಳಾವುವು: